1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ದಿನಾಂಕ ಃ 14.01.2026 ರಂದು ಪ್ರಮಾಣ ವಚನ ಬೋದಿಸಲಾಗಿದೆ.
ಸಿ. ಡಬ್ಲ್ಯೂ: 32 ಪಿ. ಡಬ್ಲ್ಯೂ:25

| | |
|---|---|
| ಸಾಕ್ಷಿದಾರರ ಹೆಸರು | ಶ್ರೀಧರ ಬಿ ಎಸ್ |
| ತಂದೆಯ ಹೆಸರು | ಸೋಮಣ್ಣ |
| ವಯಸ್ಸು | 44 ವರ್ಷ |
| ಉದ್ಯೋಗ | ವೃತ್ತ ನಿರೀಕ್ಷಕರು, ಹಲಗೂರು ವೃತ್ತ, ಮಳವಳ್ಳಿ ತಾ. |
| ವಾಸ | ಮಳವಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ದಿಃ 25.04.2022 ರಿಂದ ಹಲಗೂರು ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿಃ 31.08.2022 ರಂದು ಈ ಪ್ರಕರಣದ ಕಡತವನ್ನು ಫ್ರಾಸಾ.24 ರವರಿಂದ ಪಡೆದುಕೊಂಡು ಕಡತವನ್ನು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ.
3. ಅದೇ ದಿನ ಮಳವಳ್ಳಿಯ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ, ಪಂಚರಾದ ಫ್ರಾಸಾ. 9 ಮತ್ತು 10 ಮತ್ತು ಚಾಸಾ. 10 ರವರನ್ನು ಬರಮಾಡಿಕೊಂಡಿರುತ್ತೇನೆ,. ಸದರಿ ಪಂಚರಿಗೆ ಪ್ರಕರಣದ ವಿದ್ಯಮಾನಗಳನ್ನು ತಿಳಿಸಿ, ಸದರಿ ಮಹದೇವಮ್ಮ ರವರ ಶವದ ಶವ ಪಂಚನಾಮೆ ಕಾಲದಲ್ಲಿ ಸಹಕರಿಸುವಂತೆ ಕೋರಿಕೊಂಡಿರುತ್ತೇನೆ. ಸದರಿಯವರಿಗೆ ಪಂಚಾನಮೆಯ ನೋಟಿಸನ್ನು ಸಹ ನೀಡಿರುತ್ತೇನೆ. ನಂತರ ಸದರಿ ಪಂಚರ ಸಮಕ್ಷಮದಲ್ಲಿ ಶವದ ಮೇಲಿನ ಗಾಯಗಳನ್ನು ಪರಿಶೀಲನೆ ಮಾಡಿರುತ್ತೇನೆ. ಸದರಿ ಸಮಯದಲ್ಲಿ 7 ಗಾಯಗಳು ಶವದ ಮೇಲೆ ಕಂಡು ಬಂದಿರುತ್ತವೆ. ನಂತರ ಸದರಿ ಪಂಚರ ಸಮಕ್ಷಮದಲ್ಲಿ ಮಹದೇವಮ್ಮ ರವರ ಶವ ಪಂಚನಾಮೆ ಮಾಡಿದ್ದು, ಸದರಿ ಪಂಚನಾಮೆಯಲ್ಲಿ ಗಾಯಗಳ ಬಗ್ಗೆ ನಮೂದು ಮಾಡಿರುತ್ತೇನೆ. ಸದರಿ ಪಂಚನಾವೆಯನ್ನು ಬೆಳಗ್ಗೆ 7.00 ಗಂಟೆಯಿಂದ 9.00 ಗಂಟೆ ತನಕ ಮಾಡಿಕೊಂಡಿರುತ್ತೇನೆ. ಶವ ಪಂಚನಾಮೆ ಕಾಲದಲ್ಲಿ ಫ್ರಾಸಾ. 2 ಮತ್ತು ಫ್ರಾಸಾ.7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಶವ ಪಂಚನಾಮೆ ಕಾಲದಲ್ಲಿ ನಮ್ಮ

ಸಿಬ್ಬಂದಿ ಪ್ರಾಸಾ.17 ರವರ ಮುಖೇನ ಫೋಟೋ ತೆಗೆಸಿಕೊಂಡಿರುತ್ತೇನೆ. ನಂತರ ಮರಣೋತ್ತರ ಪರೀಕ್ಷೆ ನಡೆಸುವ ಸಲುವಾಗಿ ನಿಗದಿತ ನಮೂನೆಯಲ್ಲಿ ಮಳವಳ್ಳಿ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿ ಮನವಿ ನೀಡಿರುತ್ತೇನೆ. ಮರಣೋತ್ತರ ಪರೀಕ್ಷೆ ನಂತರ ಮೃತದೇಹವನ್ನು ವಾರಸುದಾರರಿಗೆ ನೀಡಿ ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಶವ ಪಂಚನಾಮೆ, ಪಂಚರಿಗೆ ನೀಡಿದ ನೋಟಿಸನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ.11 ಮತ್ತು ನಿಪಿ.24 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿ ಇರುವ ಸಾಕ್ಷಿಯ ಸಹಿಗಳನ್ನು ನಿಪಿ.11(ಎಫ್), (ಜಿ ) ಮತ್ತು ನಿಪಿ.24(ಬಿ) ಎಂದು ಗುರುತಿಸಲಾಯಿತು. ಪೊಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.20 ರಿಂದ 23 ಎಂದು ಗುರುತಿಸಲಾಗಿದ್ದು, ನಿಪಿ.23 ಮತ್ತು 23 ರ ಕೆಳಭಾಗದಲ್ಲಿ ಇರುವ ಸಾಕ್ಷಿಯ ಸಹಿಗಳನ್ನು ನಿಪಿ.21(ಎ) ಮತ್ತು ನಿಪಿ.23(ಎ) ಎಂದು ಗುರುತಿಸಲಾಯಿತು. ವೈದ್ಯರಿಗೆ ನೀಡಿದ ಮನವಿ ಹಾಗೂ ವರದಿಗಳ ಕಾರ್ಬನ್ ಪ್ರತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.35 ಮತ್ತು 36 ಎಂದು ಗುರುತಿಸಲಾಗಿರುತ್ತದೆ.

4. ದಿಃ 02.09.2022 ರಂದು ಪ್ರಾಸಾ. 4, 5 ಮತ್ತು ಪ್ರಾಸಾ. 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ
5. ದಿಃ 03.09.2022 ರಂದು ಪ್ರಾಸಾ. 6, 8, 11, 12 ರವರ ಹೇಳಿಕಗಳನ್ನು ಪಡೆದುಕೊಂಡಿರುತ್ತೇನೆ.
6. ದಿಃ 04.09.2022 ರಂದು ಪ್ರಾಸಾ.2, 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ
7. ದಿಃ 05.09.2022 ರಂದು ಸಿಬ್ಬಂದಿಗಳಾದ ಚಾಸಾ. 21 ರಿಂದ 23, 25, ಪ್ರಾಸಾ.16, 17, 19 ಮತ್ತು 20 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.
8. ದಿಃ 12.09.2022 ರಂದು ಘಟನಾ ಸ್ಥಳದ ನಾಕಶೆಯನ್ನು ತಯಾರು ಮಾಡಿಕೊಡುವಂತೆ ಲೋಕೋಪಯೋಗಿ ಇಲಾಖೆಯ ಅಭಿಯಂತರರಿಗೆ ಮನವಿ ನೀಡಿರುತ್ತೇನೆ.
9. ಅದೇ ದಿನ ಪ್ರಾಸಾ. 2 ಮತ್ತು 3 ರವರ ಕಲಂ 164 ಸಿ ಆರ್ ಪಿ ಸಿ ಅಡಿಯಲ್ಲಿ ಹೇಳಿಕೆಯನ್ನು ದಾಖಲು ಮಾಡಿಕೊಳ್ಳುವಂತೆ ಮಳವಳ್ಳಿ ನ್ಯಾಯಾಲಯಕ್ಕೆ ನಿವೇದನೆಯನ್ನು ಸಲ್ಲಿಸಿರುತ್ತೇನೆ.
10. ದಿಃ 26.09.2022 ರಂದು ಚಾಸಾ. 19 ರವರಿಂದ ಘಟನಾ ಸ್ಥಳದ ನಕಾಶೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ನಕಾಶೆಯನ್ನು ಈಗಾಗಲೇ ನಿಪಿ. 38 ಎಂದು

ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.38(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಅಭಿಯಂತರರಿಗೆ ನೀಡಿದ ಕೋರಿಕೆ ಪತ್ರ ಹಾಗೂ ನಿಪಿ.38 ಕ್ಕೆ ಸಂಬಧಿಸಿದ ಕವರಿಂಗ್ ಪತ್ರವನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.54 ಮತ್ತು 55 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.54(ಎ) ಮತ್ತು 55(ಎ) ಎಂದು ಗುರುತಿಸಲಾಯಿತು.

11. ಅದೇ ದಿನ ಫ್ರಾಸಾ. 3 ರವರ ಕಲಂ.164 ಸಿಆರ್ಪಿಸಿ ಅಡಿಯ ಹೇಳಿಕೆಯನ್ನು ನ್ಯಾಯಾಲಯವು ದಾಖಲಿಸಿಕೊಂಡಿದ್ದು ಸದರಿ ಹೇಳಿಕೆಯ ಪ್ರತಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

12. ದಿಃ 28.09.2022 ರಂದು ಮೃತೆ ಮಹದೇವಮ್ಮ ಮತ್ತು ಫ್ರಾಸಾ.1 ಸಿದ್ದರಾಜು ರವರು ಚಿಕಿತ್ಸೆ ಪಡೆದ ಬಗ್ಗೆ ಮಳವಳ್ಳಿ ಸರ್ಕಾರಿ ಆಸ್ಪತ್ರೆಯಿಂದ ವೈದಕೀಯ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು, ಎಂ.ಎಲ್.ಸಿ ರಿಜಿಸ್ಟರ್ ಪ್ರತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.56 ಮತ್ತು 57 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.56(ಎ) ಮತ್ತು ನಿಪಿ.57(ಎ) ಎಂದು ಗುರುತಿಸಲಾಯಿತು.

13. ದಿಃ 01.10.2022 ರಂದು ಮಳವಳ್ಳಿ ಸರ್ಕಾರಿ ಆಸ್ಪತ್ರೆಯಿಂದ ಮೃತೆ ಮಹದೇವಮ್ಮ ರವರ ಮರಣೋತ್ತರ ಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತೆನೆ. ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.34 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 34(ಬಿ) ಎಂದು ಗುರುತಿಸಲಾಯಿತು.

14. ದಿಃ 12.10.2022 ರಂದು ಎಫ್.ಎಸ್.ಎಲ್. ಮೈಸೂರು ರವರಿಂದ ವರದಿಯು FLMS ಮುಖಾಂತರ ಬಂದಿದ್ದು ಅದನ್ನು ಡೌನ್ ಲೋಡ್ ಮಾಡಿ ಸದರಿ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.37 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.37 (ಎ) ಎಂದು ಗುರುತಿಸಲಾಯಿತು.

15. ದಿಃ 13.10.2022 ರಂದು ಗಾಯಾಳು ಮಹದೇವಮ್ಮ ಹಾಗೂ ಸಿದ್ದರಾಜು ರವರಿಗೆ ಸಂಬಂಧಿಸಿದ ಗಾಯದ ಪ್ರಮಾಣಪತ್ರಗಳನ್ನು ಮಳವಳ್ಳಿ ಸರ್ಕಾರಿ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.31 ಮತ್ತು 32 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ.31 (ಬಿ) ಮತ್ತು 32(ಬಿ) ಎಂದು ಗುರುತಿಸಲಾಯಿತು.

16. ಈ ಪ್ರಕರಣದಲ್ಲಿ ತನಿಖೆ ಮುಕ್ತಾಯಗೊಂಡಿದ್ದು, ಆರೋಪಿಯ ವಿರುದ್ಧ ಆರೋಪ ದೃಢಪಟ್ಟಿದ್ದರಿಂದ ದಿಃ 13.10.2022 ರಂದು ನಾನು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

17. ಪ್ರಾಸಾ.2 ರವರು ನಿಪಿ.9 ಮತ್ತು 10 ರಂತೆ, ಪ್ರಾಸಾ.4 ರವರು ನಿಪಿ.12 ರಂತೆ, ಪ್ರಾಸಾ.3 ರವರು ನಿಪಿ.13, 14 ಮತ್ತು 15 ರಂತೆ, ಪ್ರಾಸಾ.5 ರವರು ನಿಪಿ.16 ರಂತೆ , ಪ್ರಾಸಾ.7 ರವರು ನಿಪಿ.18, 18(ಎ) ರಂತೆ, ಪ್ರಾಸಾ. 8 ರವರು ನಿಪಿ.19 ರಂತೆ, ಪ್ರಾಸಾ. 11 ರವರು ನಿಪಿ.27 ಮತ್ತು 27(ಎ) ರಂತೆ ನನ್ನ ಮುಂದೆ ಹೇಳಿಕೆಗಳನ್ನು ನೀಡಿರುತ್ತಾರೆ.

18. ಸಾಕ್ಷಿಯು ಪ್ರಾಸಾ.17 ರವರು ನೀಡಿದ ಕಲಂ 65(ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.41 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.41(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯಕ್ಕೆ ನೀಡಿದ ಮನವಿಯನ್ನು ನೋಡಿ ಗುರುತಿಸಿದ್ದು ಸದರಿ ಮನವಿಯನ್ನು ನಿಪಿ.58 ಎಂದು, ಸಾಕ್ಷಿಯ ಸಹಿಯನ್ನು ನಿಪಿ.58(ಎ)ಎಂದು ಗುರುತಿಸಲಾಯಿತು.

19. ದೋಷಾರೋಪಣ ಪಟ್ಟಿ ಸಲ್ಲಿಸಿದ ನಂತರ ನಾನು ದಿಃ 16.11.2022 ರಂದು ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಮಹದೇವಮ್ಮ ಮತ್ತು ಸಿದ್ದರಾಜು ರವರು ಚಿಕಿತ್ಸೆ ಪಡೆದುಕೊಂಡ ಬಗ್ಗೆ ವೈದ್ಯಕೀಯ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ, ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದರಿ ವೈದ್ಯಕೀಯ ದಾಖಲಾತಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ. 48 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ.48(ಎ) ಮತ್ತು (ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಕೆ ಟಿ ಎಸ್ ವಕೀಲರು ಃ Chief defence counsel ರವರಿಂದ ಃ**

ನ್ಯಾಯಾಲಯದ ಮಧ್ಯಾಹ್ನದ ಸಮಯವಾದ್ದರಿಂದ, ಪಾಟೀ ಸವಾಲನ್ನು ಮಧ್ಯಾಹ್ನ 2.45 ಕ್ಕೆ ಮುಂದೂಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ. ಹೇ. ಕೇ. ಸ. ಒ
(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ದಿನಾಂಕ ಃ 14.01.2026 ರಂದು ಮಧ್ಯಾಹ್ನ 2.50 ಕ್ಕೆ ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಗಿದೆ.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಕೆ ಟಿ ಎಸ್ ವಕೀಲರು ಃ Chief defence counsel ರವರಿಂದ ಃ**

20. ಸದರಿ ಪ್ರಾಸಾ.9 ಮತ್ತು 10 ಮತ್ತು ಚಾಸಾ.10 ರವರು ಆಸ್ಪತ್ರೆಯ ಬಳಿ ಇದ್ದರು.ಶವ ಪಂಚನಾಮೆ ಕಾಲದಲ್ಲಿ ಪ್ರಾಸಾ.2 ಮತ್ತು 7 ರವರ ಹೇಳಿಕೆಗಳನ್ನು ಪಡೆದಿದ್ದೆನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಪ್ರಾಸಾ.2 ರವರು ನಿಪಿ.9 ಮತ್ತು 10 ರಂತೆ, ಪ್ರಾಸಾ.4 ರವರು ನಿಪಿ.12 ರಂತೆ, ಪ್ರಾಸಾ.3 ರವರು ನಿಪಿ.13, 14 ಮತ್ತು 15 ರಂತೆ, ಪ್ರಾಸಾ.5 ರವರು ನಿಪಿ.16 ರಂತೆ, ಪ್ರಾಸಾ.7 ರವರು ನಿಪಿ.18, 18(ಎ) ರಂತೆ, ಪ್ರಾಸಾ. 8 ರವರು ನಿಪಿ.19 ರಂತೆ, ಪ್ರಾಸಾ.11 ರವರು ನಿಪಿ.27 ಮತ್ತು 27(ಎ) ರಂತೆ ನನ್ನ ಮುಂದೆ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ.21 ರಿಂದ 23, 25, ಪ್ರಾಸಾ. 16, 17 ರಿಂದ 20 ರವರ ಹೇಳಿಕೆಗಳನ್ನು ಪ್ರಕರಣಕ್ಕೆ ಪೂರಕವಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಪ್ರಾಸಾ. 3 ರವರ ಕಲಂ 164 ಸಿಆರ್‌ಪಿಸಿ ಹೇಳಿಕೆಯನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವಂತೆ ವೈದ್ಯಕೀಯ ದಾಖಲಾತಿಗಳನ್ನು ಸೃಷ್ಟಿಸಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಾಸಾ. 6 ಮತ್ತು 12 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

21. ಘಟನಾ ಸ್ಥಳಕ್ಕೆ ನಾನು ಭೇಟಿ ನೀಡಿಲ್ಲ. ಆರೋಪಿಯ ವಿರುದ್ಧ ಯಾವುದೇ ಆರೋಪ ಸಾಬೀತಾಗದೇ ಇದ್ದರೂ ಸಹ ನಾನು ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** ಃ ಇರುವುದಿಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.